ಕನ್ನಡ ಅಧ್ಯಾಪಕ, ಜಾನಪದ ವಿದ್ವಾಂಸ, ಲೇಖಕ ಪುರುಷೋತ್ತಮ ಬಿಳಿಮಲೆ ಬಹುಮುಖ ಪ್ರತಿಭೆ ಉಳ್ಳವರು. ನವದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ(ಜೆ.ಎನ್.ಯು)ದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಅವರು ದೆಹಲಿಯ ಕರ್ನಾಟಕ ಸಂಘವನ್ನು ಕಟ್ಟಿದವರಲ್ಲಿ ಪ್ರಮುಖರು. ಜೆ.ಎನ್.ಯು.ನ ಕನ್ನಡ ಪೀಠದಲ್ಲಿ ಅವರು ಮಾಡಿದ ಕೆಲಸಗಳು ರಾಷ್ಟ್ರೀಯ – ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡವನ್ನು ಗುರುತಿಸುವಂತೆ ಮಾಡಿವೆ. 'ಶ್ರೀವಿಜಯನ ಕವಿರಾಜ ಮಾರ್ಗಂ', 'ರನ್ನನ ಗದಾಯುದ್ಧಂ', 'ಶಿವಕೋಟ್ಯಾಚಾರ್ಯನ ವಡ್ಡಾರಾಧನೆ', ಶಿವರಾಮ ಕಾರಂತರ ಕಾದಂಬರಿ 'ಅಳಿದ ಮೇಲೆ', ರಹಮತ್ ತರೀಕೆರೆ ಅವರ 'ಅಮೀರಬಾಯಿ ಕರ್ನಾಟಕಿ' ಮುಂತಾದ ಪುಸ್ತಕಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಕನ್ನಡ ಪೀಠದಿಂದ ಪ್ರಕಟಿಸಿದ್ದಾರೆ. ಪುರುಷೋತ್ತಮ ಬಿಳಿಮಲೆ ಅವರು 18 ಪುಸ್ತಕಗಳನ್ನು ಬರೆದು ಪ್ರಕಟಿಸಿ, 11 ಪುಸ್ತಕಗಳನ್ನು ಸಂಪಾದಿಸಿದ್ದಾರೆ. 'ಮೆಕೆಂಜಿ ಕೈಫಿಯತ್ತುಗಳು', 'ಕರಾವಳಿ ಜಾನಪದ', 'ಶಿಷ್ಟ ಪರಿಶಿಷ್ಟ', 'ಕೋಮುವಾದ ಮತ್ತು ಜನಸಂಸ್ಕೃತಿ', 'ಹಂಪಿ ಜಾನಪದ', ' ಕುಮಾರರಾಮ', 'ಜನಸಂಸ್ಕೃತಿ', 'ಬಹುರೂಪ', 'ಮೆಲುದನಿ' ಅವರ ಕೆಲವು ಮುಖ್ಯ ಪುಸ್ತಕಗಳಾಗಿವೆ. ಅವರನ್ನು ಸಂದರ್ಶಿಸಿದ್ದಾರೆ: ಸಂದೀಪ ನಾಯಕ

